1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 54/2025

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಡಾಃಶ್ರೀಧರ | ಪಿಡಬ್ಲೂ -09 |
| ತಂದೆಯ ಹೆಸರು | - | ಕೃಷ್ಣಪ್ಪ | ಸಿ ಡಬ್ಲ್ಯು 14 |
| ವಯಸ್ಸು | - | 49 ವರ್ಷ | |
| ಉದ್ಯೋಗ | - | ಅಸೋಸಿಯೇಟ್ ಪ್ರೋಫೇಸರ್<br>ಹಿಮ್ಸ್ ಆಸ್ಪತ್ರೆ, ಹಾಸನ | |
| ವಾಸ ಸ್ಥಳ | - | ಹಾಸನ | |

(The accused is in judicial custody and today he is produced through video conferencing from District Prison, Chikkamagaluru and before recording the evidence of witness, it is got confirmed from the accused that the voice is clearly audible to him.)

ದಿನಾಂಕಃ 17-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ಕಳೆದ 20 ವರ್ಷಗಳಿಂದ ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಅಸೋಸಿಯೇಟ್ ಪ್ರೋಫೇಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 15-01-2025 ರಂದು ಮಧ್ಯಾಹ್ಞ 1.45 ಗಂಟೆಗೆ ನಮ್ಮ ಆಸ್ಪತ್ರೆಯ ವೈದ್ಯರಾದ ಚಾಸಾ.15 ಸುಮರವರು ಕರ್ತವ್ಯದಲ್ಲಿದ್ದ ಸಮಯದಲ್ಲಿ ಶಾರದ ಕೋಂ ಮಂಜು ರವರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಪ್ರಾಸಾ.8 ಗೀತಾಂಜಲಿರವರ ಸೂಚನೆಯ ಮೇರೆಗೆ ನಮ್ಮ ಆಸ್ಪತ್ರೆಗೆ ಬಂದು ದಾಖಲಾಗಿರುತ್ತಾರೆ. ಆ

ಸಮಯದಲ್ಲಿ ರೋಗಿ ಶಾರದರವರು ಪ್ರಜ್ಞಾಹೀನರಾಗಿದ್ದು, ಅವರೊಂದಿಗೆ ಬಂದಿದ್ದ ಅವರ ತಾಯಿ ಆಗ್ಗೆ 2 ದಿನಗಳ ಹಿಂದಿನಿಂದ ನಿರಂತರವಾಗಿ 7 ರಿಂದ 8 ಬಾರಿ ಆಕೆಗೆ ಪಿಟ್ಸ್ ಬಂದಿದ್ದಾಗಿ, ಆಕೆಗೆ ಈ ಹಿಂದೆ ಒಮ್ಮೆ ಸಿಜರಿಯನ್ ಆಗಿದ್ದಾಗಿ, ಆಕೆ 2 ನೇ ಬಾರಿಗೆ ಗರ್ಭಿಣಿಯಾಗಿ 9 ತಿಂಗಳು ಆಗಿದ್ದಾಗಿ, ಆಕೆಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ, ಅಲ್ಲಿನ ವೈದ್ಯರ ಸೂಚನೆಯ ಮೇರೆಗೆ ಆಕೆಯನ್ನು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾಗಿ ತಿಳಿಸಿದರು.

3. ನಾವು ಕೂಡಲೇ ಶಾರದವರನ್ನು ಪರೀಕ್ಷೆಗೆ ಒಳಪಡಿಸಿ ಆಕೆಯ ಪ್ರೆಗ್ನೇನ್ಸಿಗೆ ಮತ್ತು ಎಪಿಲಿಪ್ಸಿಗೆ ಚಿಕಿತ್ಸೆಯನ್ನು ಪ್ರಾರಂಭಿಸಿದೆವು. ಅದೇ ದಿನ ರಾತ್ರಿ 8.48 ಗಂಟೆಗೆ ನಮ್ಮ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಚಾಸಾ.15 ರವರು ಶಾರದರವರಿಗೆ ಶ್ರಸ್ತಚಿಕಿತ್ಸೆ ಮಾಡಿ 2 ಕೆ.ಜಿ. ತೂಕದ ಗಂಡುಮಗುವನ್ನು ಹೊರತೆಗೆದಿರುತ್ತಾರೆ. Eclampsia ಇದ್ದ ಪಕ್ಷದಲ್ಲಿ ಸಾಮಾನ್ಯವಾಗಿ ಹೆರಿಗೆಯಾದ ಬಳಿಕ ರೋಗಿಗೆ ಪ್ರಜ್ಞೆ ಬರುತ್ತಿತ್ತು. ಆದರೆ ಶಾರದರವರಿಗೆ ಹೆರಿಗೆಯ ನಂತರವು ಪ್ರಜ್ಞೆ ಬಾರದ ಕಾರಣ ಆಕೆಯ ಮೆದುಳಿಗೆ ಸಂಬಂಧಿಸಿದ ಬೇರೆ ಯಾವುದಾದರೂ ತೊಂದರೆ ಇರಬಹುದು ಎಂದು ಅನುಮಾನಿಸಿ ಆಕೆಯ ಸಿಟಿ ಸ್ಕ್ಯಾನ್ ನ್ನು ಅದೇ ದಿನ ಮಾಡಿಸಲಾಯಿತು. ಸದರಿ ಸ್ಕ್ಯಾನ್ ವರದಿಯಲ್ಲಿ ಆಕೆಯ ಮೊದಲನೇ ಗರ್ಭಾವಸ್ಥೆ ಸಮಯದಲ್ಲಿ ಆಕೆಯ ಮೆದುಳಿಗೆ Infarction ಆಗಿದ್ದು ಕಂಡುಬಂತು. ಆಕೆಗೆ ಚಿಕಿತ್ಸೆ ನೀಡಿದ್ದಾಗಿಯೂ, ಆಕೆಗೆ ಪ್ರಜ್ಞೆ ಬರಲಿಲ್ಲ. ಶಾರದ ದಿಃ 21-01-2025 ರಂದು ಬೆಳಿಗ್ಗೆ 8.35 ಗಂಟೆಗೆ ಮೃತಪಟ್ಟರು.

4. ಶಾರದರವರು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದ ಸಮಯದಲ್ಲಿ

ನಾನು ನಮ್ಮ ಆಸ್ಪತ್ರೆಯ ಸಿ ಯುನಿಟ್ ನ ಮುಖ್ಯಸ್ಥನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ನಮ್ಮ ಯುನಿಟ್ ನಲ್ಲಿ ಚಾಸಾ.15 ಸುಮ ಮತ್ತು ಇನ್ನೂ ಇಬ್ಬರು ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದರು. ಶಾರದವರಿಗೆ ನೀಡಲಾದ ಚಿಕಿತ್ಸೆ ಬಗ್ಗೆ ನಾನು ಉಸ್ತುವರಿ ಮಾಡಿದ್ದೇನೆ ಮತ್ತು ಆ ಬಗ್ಗೆ ಅವರ ಕೇಸ್ ಶೀಟಿನಲ್ಲಿ ಸಹಿ ಮಾಡಿದ್ದೇನೆ.

5. ಶಾರದವರನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಿಂದ ನಮ್ಮ ಆಸ್ಪತ್ರೆಗೆ ಕಳುಹಿಸಿ ಕೊಟ್ಟ ಬಗ್ಗೆ ರೇಫರಲ್ ಕಾರ್ಡಿನ ದೃಢೀಕೃತ ಪ್ರತಿಯನ್ನು ನಮ್ಮ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರು ನೀಡಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸದರಿ ರೇಫರಲ್ ಕಾರ್ಡಿನ ದೃಢೀಕೃತ ಪ್ರತಿಯನ್ನು ನಿಪಿ.13 ಎಂದು ಗುರುತಿಸಲಾಯಿತು.

6. ಶಾರದರವರು ಗರ್ಭಿಣಿ ಮತ್ತು ಪ್ರಜ್ಞಾಹೀನರಾಗಿದ್ದ ಕಾರಣ ಅವರನ್ನು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದ ಕೂಡಲೇ ಪ್ರಸುತಿ ಮತ್ತು ಸ್ತ್ರೀ ರೋಗ ವಿಭಾಗಕ್ಕೆ ದಿಃ 15-01-2025 ರಂದು ಮೊದಲಿಗೆ ಆಂಬ್ಯುಲೇನ್ಸಿನವರು ಕರೆದುಕೊಂಡು ಬಂದಿದ್ದರು. ನಾವು ಆಕೆಯನ್ನು ಪರೀಕ್ಷಿಸಿದ ಬಳಿಕ ಶಾರದವರನ್ನು ನಮ್ಮ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರಾದ ಡಾಃ ವಿನಯರವರ ಬಳಿ ಕಳುಹಿಸಿ ಕೊಟ್ಟಿದ್ದೆನು. ಅವರು ಆಕೆಯನ್ನು ಪರೀಕ್ಷಿಸಿ ಘಟನೆಯ ಹಿನ್ನಲೆಯನ್ನು ಎಂ.ಎಲ್.ಸಿ. ವಹಿಯನ್ನು ದಾಖಲಿಸಿದ್ದಾರೆ. ಸದರಿ ಎಂ.ಎಲ್.ಸಿ. ವಹಿಯ ದೃಢೀಕೃತ ಪ್ರತಿಯನ್ನು ವಿನಯರವರು ನೀಡಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸದರಿ ಎಂ.ಎಲ್.ಸಿ. ವಹಿಯ ದೃಢೀಕೃತ ಪ್ರತಿಯನ್ನುನಿಪಿ.14 ಎಂದು ಗುರುತಿಸಲಾಯಿತು.

7. ಮೊದಲಿಗೆ ಚಾಸಾ.15 ರವರು ಶಾರದವರನ್ನು ಪರೀಕ್ಷಿಸಿದ ಬಗ್ಗೆ ಹೊರರೋಗಿ ಚೀಟಿಯ ದೃಢೀಕೃತ ಪ್ರತಿಯನ್ನು ನಮ್ಮ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರು ನೀಡಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸದರಿ ಹೊರರೋಗಿ ಚೀಟಿಯ ದೃಢೀಕೃತ ಪ್ರತಿಯನ್ನು ನಿಪಿ.15 ಎಂದು ಗುರುತಿಸಲಾಯಿತು. ಶಾರದವರನ್ನು ಒಳರೋಗಿಯಾಗಿ ದಾಖಲಿಸಿದ ಬಗ್ಗೆ ನಮ್ಮ ಆಸ್ಪತ್ರೆಯ ಕ್ಯಾಸುಲಿಟಿ ಮೆಡಿಕಲ್ ಆಫೀಸರ್ ರವರು ದೃಢೀಕೃತ ಪ್ರತಿಯನ್ನು ನೀಡಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸದರಿ ಚೀಟಿಯ ದೃಢೀಕೃತ ಪ್ರತಿಯನ್ನು ನಿಪಿ.16 ಎಂದು ಗುರುತಿಸಲಾಯಿತು.

8. ಶಾರದರವರಿಗೆ ನೀಡಲಾದ ಚಿಕಿತ್ಸೆ ಮತ್ತು ಪರೀಕ್ಷಾ ವರದಿಗಳನ್ನು ಒಳಗೊಂಡ ಕೇಸ್ ಶೀಟಿನ ದೃಢೀಕೃತ ಪ್ರತಿಗಳನ್ನು ನಮ್ಮ ಆಸ್ಪತ್ರೆಯ ಕ್ಯಾಸುಲಟಿ ವೈದ್ಯಾಧಿಕಾರಿಗಳು ನೀಡಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸದರಿ ಕೇಸ್ ಶೀಟಿನ ದೃಢೀಕೃತ ಪ್ರತಿಗಳನ್ನು ಒಟ್ಟಾಗಿ ನಿಪಿ.17 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ, ಅವುಗಳನ್ನು ನಿಪಿ.17(ಎ), 17(ಬಿ), 17(ಸಿ) ಮತ್ತು ನಿಪಿ.17(ಡಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಜಿ.ಎಸ್.ಎಸ್ ವಕೀಲರು ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ